## ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು , ಚಿತ್ರದುರ್ಗ ಜಿಲ್ಲೆ.

**ಅಸಲು ದಾವಾ ಸಂಖ್ಯೆ 55/2025**

ದಿನಾಂಕಃ 27 ನೇ ಮಾರ್ಚ್ -2026

ವಾದಿಯರು ಃ 1. ಶ್ರೀ ಪಿಲ್ಲಪ್ಪ
ತಂದೆ ಲಿಂಗಣ್ಣ , ಪ್ರಾಯ 80 ವರ್ಷ

2. ಏಕಾಂತ ಜಿ ಪಿ
ತಂದೆ ಪಿಲ್ಲಪ್ಪ , ಪ್ರಾಯ 39 ವರ್ಷ

3. ಗುರುನಾಥ ಜಿ ಪಿ
ತಂದೆ ಪಿಲ್ಲಪ್ಪ , ಪ್ರಾಯ 34 ವರ್ಷ

4. ಗೌತಮ ಜಿ ಪಿ
ತಂದೆ ಪಿಲ್ಲಪ್ಪ , ಪ್ರಾಯ 25 ವರ್ಷ ,

ಎಲ್ಲರ ವಾಸಃ ಹಾಲುಮರದಹಟ್ಟಿ ಮಜುರೆ
ಸೂರಗೊಂಡನಹಳ್ಳಿ ಗ್ರಾಮ, ಐಮಂಗಲ ಹೋಬಳಿ,
ಹಿರಿಯೂರು ತಾಲ್ಲೂಕು.

(ವಾದಿ ಪರವಾಗಿಃ ಶ್ರೀ ಎಸ್ .ಜೆ .,ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ 1. ಶ್ರೀಮತಿ ಕರಿಯಮ್ಮ
ಬಿನ್ ಲೇಟ್ ಚಿತ್ತಪ್ಪ , ಪ್ರಾಯ 55 ವರ್ಷ

ವಾಸಃ ಹಾಯಿಕಲ್ ಗ್ರಾಮ, ತುರುವನೂರು
ಹೋಬಳಿ,ಚಿತ್ರದುರ್ಗ ಜಿಲ್ಲೆ .

2. ಶಿವಣ್ಣ ಬಿನ್ ಲೇಟ್ ಚಿತ್ತಪ್ಪ , ಪ್ರಾಯ 50 ವರ್ಷ
ವಾಸಃ ಕೂನಿಕೆರೆ ಗ್ರಾಮ, ಕಸಬಾ ಹೋಬಳಿ,
ಹಿರಿಯೂರು ತಾಲ್ಲೂಕು .

(1 ಮತ್ತು 2 ನೇ ಪ್ರತಿವಾದಿಯರ ಪರವಾಗಿಃ
ಶ್ರೀ ಕೆ ಆರ್ ಡಿ., ವಕೀಲರು )

**ಮಧ್ಯಂತರ ಅರ್ಜಿ ಸಂಖ್ಯೆ– 1 ರ ಪಕ್ಷಗಾರರು**

ಅರ್ಜಿದಾರರು / ಒಂದನೇ ವಾದಿ ಃ ಶ್ರೀ ಪಿಲ್ಲಪ್ಪ

– ವಿರುದ್ಧ –

ಎದುರುದಾರರು /ಪ್ರತಿವಾದಿಯರು ಃ ಶ್ರೀಮತಿ ಕರಿಯಮ್ಮ ಮತ್ತು ಇತರರು

| | | |
|---|---|---|
| 1 | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ | ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ |
| 2 | ಯಾವ ಪರಿಹಾರಕ್ಕಾಗಿ | ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಕೋರಿ |
| 3 | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ | 11.03.2025 |
| 4 | ಆರ್ಜಿಯ ವಿರುದ್ದ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕ | 31.10.2025 |
| 5 | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ | 27.03.2026 |

**ಅರ್ಜಿದಾರರು / ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 1 ರ ಮೇಲಿನ ಆದೇಶ.**

ಅರ್ಜಿದಾರರು / ಒಂದನೇ ವಾದಿ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ದಾವಾ ಅನುಸೂಚಿ ಆಸ್ತಿಯನ್ನು ಪ್ರತಿವಾದಿಯವರಾಗಲೀ, ಅವರ ಏಜೆಂಟ್ ಮತ್ತು ಅವರ ಪರ ಪಿ ಎ ಹೋಲ್ಡರ್ ಆಗಲೀ ಈ ದಾವೆಯ ಅಂತಿಮ ತೀರ್ಪು ಆಗುವವರೆಗೆ ಮಾರಾಟ ಮಾಡಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

2. <u>1 ನೇ ವಾದಿಯು ಮಧ್ಯಂತರ ಅರ್ಜಿಯೊಂದಿಗೆ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರ ಸಾರಾಂಶ ಈ ಕೆಳಗಿನಂತೆ ಇರುತ್ತದೆ.</u>

ದಾವಾ ಆಸ್ತಿಯು ವಾದಿಯವರ ಪಿತ್ರಾರ್ಜಿತ ಆಸ್ತಿಯಾಗಿದ್ದು ಅವರು ದಾವಾ ಆಸ್ತಿಯ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಪ್ರತಿವಾದಿಯರಿಗೆ ಯಾವುದೇ ಹಕ್ಕು, ಹಿತಾಸಕ್ತಿ ಮಾಲೀಕತ್ವ ಇರುವುದಿಲ್ಲ ಅವರು ಯಾವತ್ತೂ ಕೂಡ ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿರುವುದಿಲ್ಲ ಮತ್ತು ವಾದಿಗೆ ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿದ್ದು ಅವರು ಅನುಕೂಲತೆಯ ಒಲುಮೆಯನ್ನು ಹೊಂದಿರುತ್ತಾರೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ

3. <u>ಪ್ರತಿವಾದಿಯವರು ತಕರಾರನ್ನು ಸಲ್ಲಿಸಿದು ತಕರಾರಿನ ಸಾರಾಂಶ ಈ ಕೆಳಗಿನಂತಿರುತ್ತದೆ</u>

ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿಯು ಕಾನೂನಿನಡಿಯಲ್ಲಾಗಲೀ ವಸ್ತು ಸ್ಥಿತಿಯಲ್ಲಾಗಲೀ ಉರ್ಜಿತವಾಗಿರುವುದಿಲ್ಲ. ದಾವಾ ಆಸ್ತಿಯು ವಾದಿಯ ಪಿತ್ರಾರ್ಜಿತ ಆಸ್ತಿ ಎನ್ನುವುದು ಸುಳ್ಳಾಗಿರುತ್ತದೆ,

ಅರ್ಜಿಯಲ್ಲಿ ಕಾಣಿಸಿದ ಶೆಡ್ಯೂಲ್ ಆಸ್ತಿಯು ಕಲ್ಪಿತ ಆಸ್ತಿಯಾಗಿದ್ದು ಸರ್ವೆನಂ.58/5 , 9 ಎಕರೆ 27 ಗುಂಟೆ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ. ವಾದಿಯು ಇತ್ತೀಚಿನ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ವಾದಿಯ ಪರ ಅನುಕೂಲತೆ ಒಲುಮೆ ಇರುವುದಿಲ್ಲ.

ಸರ್ವೆ ನಂ.58 ಸೂರಗೊಂಡನಹಳ್ಳಿ ಗ್ರಾಮದ ಐಮಂಗಲ ಹೋಬಳಿ ಹಿರಿಯೂರು ತಾಲ್ಲೂಕಿನ ಆಸ್ತಿಯು ಒಟ್ಟು 84 ಎಕರೆ 24 ಗುಂಟೆ ಸರ್ಕಾರದ ಆಸ್ತಿಯಾಗಿದ್ದು ಆ ಆಸ್ತಿಯಲ್ಲಿ 9 ಎಕರೆ 27 ಗುಂಟೆಯನ್ನು ದಾಸಪ್ಪ ಬಿನ್ ಗೌನಹಳ್ಳಿ ಕರಿಯಪ್ಪ ಅಂದರೆ ಪ್ರತಿವಾದಿಯರ ತಾತನವರಿಗೆ ಮಂಜೂರಾಗಿದ್ದು ಪೋಡಿಯಾದ ನಂತರ ಆ ಆಸ್ತಿಯು ಸರ್ವೆ ನಂ.144 ಎಂದು ಬದಲಾವಣೆಯಾಗಿದ್ದು ದಾಸಪ್ಪ ಇವರು ದಾವಾ ಆಸ್ತಿಯ ಸ್ವಾಧೀನವನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ದಾಸಪ್ಪ ಇವರು ದಿಃ03.06.1973 ರಂದು ತೀರಿಕೊಂಡಿದ್ದು ಅವರು ತೀರಿಕೊಂಡ ನಂತರ ಅವರ ವಾರಸುದಾರರು ದಾವಾ ಆಸ್ತಿಯನ್ನು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ಆ ಆಸ್ತಿಯು ಪ್ರತಿವಾದಿಯವರ ಪಿತ್ರಾರ್ಜಿತ ಆಸ್ತಿಯಾಗಿದ್ದು ಆ ಆಸ್ತಿಯಲ್ಲಿ ವಾದಿಗೆ ಯಾವುದೇ ರೀತಿಯ ಹಿತಾಸಕ್ತಿ ಇರುವುದಿಲ್ಲ. ವಾದಿಯು ದಾವಾ ಶೆಡ್ಯೂಲ್ ನಲ್ಲಿ ಕಾಣಿಸಿರುವಂತಹ ಚಕ್ಕುಬಂದಿ ಮಧ್ಯೆ ಇರುವ ಆಸ್ತಿಯು ಪ್ರತಿವಾದಿಯವರ ಆಸ್ತಿಯಾಗಿರುತ್ತದೆ.

ವಾದಿಯವರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಮೂಲಕ ಪ್ರತಿವಾದಿಯರ ಆಸ್ತಿಯನ್ನು ದುರ್ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ ಹಾಗೂ ದಾಸಪ್ಪ ತೀರಿಕೊಂಡ ನಂತರ ಖಾತೆಗಳು ಪ್ರತಿವಾದಿಯವರ ಹೆಸರಿನಲ್ಲಿ ಬದಲಾವಣೆಯಾಗಿರುತ್ತದೆ. ಸರ್ವೆ ನಂ.144 ಪೋಡಾದ ನಂತರ 62 ಎಂದು ಬದಲಾವಣೆ ಆಗಿರುತ್ತದೆ . ಮೂಲತಃ ಸರ್ವೆ ನಂ.58, 84 ಎಕರೆ 24 ಗುಂಟೆ ಎಂದು ಆದರೆ 9 ಎಕರೆ 27 ಗುಂಟೆ ಸರ್ಕಾರದಿಂದ ಪ್ರತಿವಾದಿಯರ ತಾತನಾದ ದಾಸಪ್ಪನವರಿಗೆ ಮಂಜೂರಾಗಿದ್ದು ತದನಂತರ ದಾಸಪ್ಪನವರು ಆ ಆಸ್ತಿಯಲ್ಲಿ ಶಾಂತಿಯುತ ಸ್ವಾಧೀನವನ್ನು ಹೊಂದಿ

ಅನುಭವಿಸಿಕೊಂಡು ಬಂದಿರುತ್ತಾರೆ . ಹೊಸ ನಂಬರ್ ನಲ್ಲಿ ಸರ್ವೆ ನಂ.144 9 ಎಕರೆ 27 ಗುಂಟೆ ಇರುತ್ತದೆ. ದಾಸಪ್ಪ ಇವರಿಗೆ ಎರಡು ಜನ ಹೆಂಡತಿಯರಿದ್ದು ಅವರು ದಂಡಮ್ಮ ಮತ್ತು ನಿಂಗಜ್ಜಿ ಆಗಿರುತ್ತಾರೆ. ದಾಸಪ್ಪ ಒಂದನೇ ಹೆಂಡತಿಯಿಂದ ಅವರಿಗೆ ಚಿತ್ತಪ್ಪ ಎನ್ನುವ ಮಗನಿದ್ದು, ಎರಡನೇ ಹೆಂಡತಿಯಿಂದ ಕರಿಯಮ್ಮ ಎನ್ನುವ ಮಗಳಿದ್ದು ಅವರಿಗೆ ಮದುವೆಯಾಗಿ ತೀರಿಕೊಂಡಿರುತ್ತಾರೆ. ದಾಸಪ್ಪ ಇವರು ಅನಕ್ಷರಸ್ಥರಾಗಿದ್ದು ಮತ್ತು ಮುಗ್ಧರಾಗಿರುತ್ತಾರೆ.

ವಾದಿಗೆ ಪ್ರತಿವಾದಿಯ ಕುಟುಂಬದಿಂದ ಯಾವುದೇ ಸಂಬಂಧ ಇರುವುದಿಲ್ಲ, ದಾಸಪ್ಪ ತೀರಿಕೊಂಡ ಪೂರ್ವದಲ್ಲಿ 03.03.1970 ರಂದು ಅವರ ಮಗ ಚಿತ್ತಪ್ಪ ಹಾಗೂ ಸೊಸೆ ಮಾರಕ್ಕ ತೀರಿಕೊಂಡಿರುತ್ತಾರೆ ಮತ್ತು ಮೊಮ್ಮಕ್ಕಳ ಹೆಸರು ಶಿವಣ್ಣ ಮತ್ತು ಕರಿಯಮ್ಮ ಆಗಿರುತ್ತದೆ . ಪ್ರತಿವಾದಿಯರ ತಾಯಿ ಮಾರಕ್ಕ ತೀರಿಕೊಂಡಿದ್ದು ಈಗ ಪ್ರತಿವಾದಿಯವರು ಮಾತ್ರ ದಾಸಪ್ಪನವರ ಕಾನೂನು ಸಮ್ಮತ ವಾರಸುದಾರರಾಗಿರುತ್ತಾರೆ ಮತ್ತು ಅವರು ದಾವಾ ಆಸ್ತಿಯನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ಪ್ರತಿವಾದಿಯವರು ಖಾತೆ ಬದಲಾವಣೆ ಮಾಡಿಕೊಂಡು ಕಂದಾಯವನ್ನು ಕೂಡ ಸರ್ಕಾರಕ್ಕೆ ಪಾವತಿಸಿರುತ್ತಾರೆ. ಆದ್ದರಿಂದ ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಕಾನೂನು ಬದ್ಧ ಮಾಲೀಕರಾಗಿರುತ್ತಾರೆ, ಕೇವಲ ಆಸ್ತಿಯನ್ನು ದುರ್ಲಾಭ ಪಡಿಸುವ ಸಲುವಾಗಿ ಕೆಲವು ದಾಖಲಾತಿಗಳನ್ನು ವಾದಿಯರು ಸೃಷ್ಟಿಸಿಕೊಂಡಿರುತ್ತಾರೆ.

ದಾಸಪ್ಪ ಇವರಿಗೆ ಚಿತ್ತಮ್ಮ ಎನ್ನುವ ಯಾವುದೇ ಹೆಂಡತಿ ಇರುವುದಿಲ್ಲ. ಆದುದರಿಂದ ಚಿತ್ತಮ್ಮ ದಾಸಪ್ಪನಿಗೆ ಯಾವುದೇ ರೀತಿಯ ಸಂಬಂಧಿಕನಾಗಿರುವುದಿಲ್ಲ. ಚಿತ್ತಮ್ಮನಿಗೆ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲ. ವಾದಿಯಾಗಲೀ ಅವರ ಪೂರ್ವಜರಾಗಲೀ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮಾಲೀಕತ್ವ ಮತ್ತು ಸ್ವಾಧೀನವನ್ನು ಹೊಂದಿರುವುದಿಲ್ಲ.

ವಾದಿಯು ಶುದ್ದ ಹಸ್ತದಿಂದ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆಃ–

1. ವಾದಿಯರು/ ಅರ್ಜಿದಾರರು ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?
2. ವಾದಿಯರು / ಅರ್ಜಿದಾರರು ತನ್ನ ಪರವಾಗಿ ಅನುಕೂಲತೆಯ ಒಲಮೆಯನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?
3. ವಾದಿಯರು / ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದಿದ್ದಲ್ಲಿ ತಮಗೆ ತುಂಬಲಾರದ ಹಾನಿ ಉಂಟಾಗುತ್ತದೆ ಎನ್ನುವುದು ಸಾಬೀತು ಪಡಿಸಿದ್ದಾರೆಯೇ?
4. ಅರ್ಜಿದಾರರು / ವಾದಿ ರವರು ಮಧ್ಯಂತರ ಅರ್ಜಿ–3 ರಲ್ಲಿ ಕೋರಿದಂತೆ ದಾವೆ ಮುಗಿಯುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ಅರ್ಹರೇ?
5. ಆದೇಶವೇನು?

6. ನ್ಯಾಯಾಲಯದ ಮುಂದಿರುವ ದಾವಾಂಶಗಳನ್ನು ಹಾಗೂ ದಾಖಲೆಗಳನ್ನು ಹಾಗೂ ಉಭಯ ವಕೀಲರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆಃ–

ಅಂಶ–1ಃ ಸಕಾರಾತ್ಮಕವಾಗಿ,
ಅಂಶ–2ಃ ಸಕಾರಾತ್ಮಕವಾಗಿ,

ಅಂಶ–3ಃ ಸಕಾರಾತ್ಮಕವಾಗಿ,
ಅಂಶ–4ಃ ಸಕಾರಾತ್ಮಕವಾಗಿ,
ಅಂಶ–5ಃ ಈ ಕೆಳಕಂಡ ಕಾರಣಗಳಿಗಾಗಿ
ಅಂತಿಮ ಆದೇಶದದಂತೆ.

**ಕಾ ರ ಣ ಗ ಳು**

**7. ಅಂಶ–1** ಃ ವಾದಿಯು ತನ್ನ ವಾದ ಪತ್ರದಲ್ಲಿ ವಾದಿಯ ಮೂಲ ಪುರುಷ ಲಿಂಗಣ್ಣ ಇವರಿಗೆ ಲಿಂಗಪ್ಪ ಮತ್ತು ಪಿಲ್ಲಪ್ಪ ಎನ್ನುವ ಇಬ್ಬರು ಮಕ್ಕಳಿದ್ದು, ಲಿಂಗಣ್ಣ ನ ಮೊದಲನೇ ಮಗ ಲಿಂಗಪ್ಪ ಅವರ ಹೆಂಡತಿ ಶಿವಲಿಂಗಮ್ಮ ಮತ್ತು ಮಕ್ಕಳಾದ ಪಾಲಾಕ್ಷಪ್ಪ, ಶಿವರಾಂ, ಇವರನ್ನು ಬಿಟ್ಟು ತೀರಿಕೊಂಡಿರುತ್ತಾರೆ. ಲಿಂಗಣ್ಣನ 2 ನೇ ಮಗ ಪಿಲ್ಲಪ್ಪ, ಇವರಿಗೆ 3 ಜನ ಗಂಡು ಮಕ್ಕಳಿದ್ದು ಅವರು ಏಕನಾಥ ಜಿ ಪಿ., ಗೌತಮ, ಗುರುನಾಥ ಜಿ ಪಿ ಎನ್ನುವವರಾಗಿರುತ್ತಾರೆ. ಸರ್ವೆ ನಂ.58/5 9 ಎಕರೆ 3 ಗುಂಟೆ ಆಸ್ತಿ ಮೂಲತಃ ಚಿತ್ರಮ್ಮ ಇವರ ಆಸ್ತಿಯಾಗಿದ್ದು ಅವರಿಗೆ ಆ ಆಸ್ತಿಯು ಅವರ ಗಂಡನ ಮುಖೇನ ಬಂದಿದ್ದು ಚಿತ್ತಮ್ಮ ಇವರು ಆ ದಾವಾ ಆಸ್ತಿಯನ್ನು ಇತರ ಆಸ್ತಿಗಳಾದ ಸರ್ವೆನಂ. 55, 56, 57 ರೊಂದಿಗೆ ಸಣ್ಣಮ್ಮರವರಿಗೆ 05.03.1953 ರಂದು ದಾನ ಪತ್ರ ಬರೆದುಕೊಟ್ಟಿರುತ್ತಾರೆ. ಸಣ್ಣಮ್ಮರವರು ಅವರ ಗಂಡು ಮಕ್ಕಳಾದ ಲಿಂಗಣ್ಣ ಮತ್ತು ಪಿಲ್ಲಪ್ಪ ಇವರಿಗೆ ದಿಃ14.02.1962 ರಂದು ದಾವಾಸ್ತಿಯನ್ನು ಇತರ ಆಸ್ತಿಯೊಂದಿಗೆ ಸೆಟಲ್ ಮೆಂಟ್ ಡೀಡ್ ಬರೆದುಕೊಟ್ಟಿದ್ದು ಎಲ್ ಲಿಂಗಣ್ಣ ಇವರು ದಾವಾ ಆಸ್ತಿ ಮತ್ತು ಸರ್ವೆ ನಂ.55, 56, 57 ಮತ್ತು ದಾವಾಸ್ತಿಗಳಲ್ಲಿ ಅರ್ಧಾಂಶ ಹಿಸ್ಸೆಯನ್ನು ದಿಃ04.01.1971 ರಂದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತಾರೆ. ಅಂದಿನಿಂದ 1 ನೇ ಪ್ರತಿವಾದಿ ಆಸ್ತಿಗೆ ಮಾಲೀಕರಾಗಿ ಸ್ವಾದೀನ ಹೊಂದಿಕೊಂಡು ಬಂದಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ.

8. ವಾದಿಯು ವಂಶವೃಕ್ಷ ಪ್ರಮಾಣ ಪತ್ರ ಮತ್ತು ದಿನಾಂಕ.05.03.1953 ರ ದಾನ ಪತ್ರದ ಪ್ರತಿ, 14.02.1962 ರ ಸಣ್ಣಮ್ಮ ಇವರು ಬರೆದುಕೊಟ್ಟ ಸೆಟಲ್ ಮೆಂಟ್ ಡೀಡ್ ನ ಪ್ರತಿ ಮತ್ತು 04.01.1979 ರ ಹಕ್ಕು ಬಿಡುಗಡೆ ಪತ್ರದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಹಾಗೂ ಸರ್ವೆ ನಂ. 144 ಪಹಣಿ ಪತ್ರಿಕೆಯನ್ನು ಮತ್ತು ರಶೀದಿ ಪುಟವನ್ನು, ಮ್ಯುಟೇಶನ್ ಪ್ರತಿಗಳನ್ನು ಸರ್ವೆ ನಂ. 62 ರ ಪಹಣಿ ಪತ್ರಿಕೆಗಳನ್ನು, ನಮೂನೆ–15 ರ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯವರು ಸರ್ವೆ ನಂ. 62 ರ ಪಹಣಿ ಪತ್ರಿಕೆ ಮತ್ತು ಮುಟೇಶನ್ ರಿಜಿಸ್ಟರ್ ಪ್ರತಿ ಎಂ ಆರ್ ಹೆಚ್ –23 , ಸರ್ವೆ ನಂ. 144 ರ ಪಹಣಿ ಪತ್ರಿಕೆಗಳನ್ನು ಮತ್ತು ವಂಶವೃಕ್ಷದ ದೃಢೀಕೃತ ಪ್ರತಿಗಳನ್ನು ದಾಸಪ್ಪ ದಂಡೆಮ್ಮ, ಮಾರಕ್ಕ , ಚಿತ್ತಣ್ಣ, ನಿಂಗಜ್ಜಿ ಮತ್ತು ಕರಿಯಮ್ಮನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ.

9. ಪ್ರತಿವಾದಿಯರ ಪ್ರಕಾರ ದಾವಾಸ್ತಿಯು ಅವರ ಮುತ್ತಾತ ದಾಸಪ್ಪನಿಗೆ ಮಂಜೂರಾದ ಆಸ್ತಿಯಾಗಿರುತ್ತದೆ ಎಂಬುದಾಗಿರುತ್ತದೆ. ವಾದಿಯರ ಪ್ರಕಾರ ದಾವಾ ಆಸ್ತಿಯು ಅವರ ಪಿತ್ರಾರ್ಜಿತ ಅಸ್ತಿಯಾಗಿ ಅವರು ಮಾಲೀಕರಾಗಿ ಸ್ವಾಧೀನ ಹೊಂದಿಕೊಂಡು ಬಂದಿರುತ್ತಾರೆ ಎಂಬುದಾಗಿರುತ್ತದೆ. ಪ್ರತಿವಾದಿಯವರ ಪ್ರಕಾರ ಅವರು ಮಾಲೀಕತ್ವ ಹೊಂದಿ ಅವರು ಅನುಭವಿಸಿಕೊಂಡು ಬಂದಿರುತ್ತಾರೆ ಎಂಬುದಾಗಿರುತ್ತದೆ. ಈ ಅಂಶಗಳನ್ನು ಪರಿಗಣಿಸಬೇಕಾದಲ್ಲಿ ಸಾಕ್ಷ್ಯಾಧಾರಗಳ ಅವಶ್ಯಕತೆ ಇರಬೇಕಾಗಿರುವುದು ಅವಶ್ಯವಾಗಿರುತ್ತದೆ.

10. ವಾದಿಯು ಹಾಜರುಪಡಿಸಿದಂತಹ ದಾನಪತ್ರವನ್ನು ಗಮನಿಸಿದಾಗ ದಾನ ಪತ್ರದಲ್ಲಿ ಗೌನಹಳ್ಳಿ ದಾಸಪ್ಪನ ಹೆಂಡತಿ ಚಿಂತಮ್ಮನು ಲಿಂಗಣ್ಣನ ಹೆಂಡತಿ ಸಣ್ಣಮ್ಮ ಇವರಿಗೆ ದಾವಾ ಆಸ್ತಿಯನ್ನು ಇತರ ಆಸ್ತಿಯೊಂದಿಗೆ ದಾನ ಪತ್ರ ಬರೆದು ಕೊಟ್ಟ ಬಗ್ಗೆ ನಮೂದು ಇರುತ್ತದೆ ಹಾಗೂ ವಾದಿಯು ಹಾಜರುಪಡಿಸಿದಂತಹ ವ್ಯವಸ್ಥಾ ಪತ್ರದಲ್ಲಿ ಸಣ್ಣಮ್ಮನವರು ದಿಃ14.02.62 ನ್ನು ಲಿಂಗಣ್ಣನ ಮಕ್ಕಳಾದ

ಹಿರೇಮಗ ಲಿಂಗಣ್ಣ ಮತ್ತು ಪಿಲ್ಲಪ್ಪ ಇವರಿಗೆ ಸರ್ವೇ ನಂ.58/5 ರಲ್ಲಿ 9 ಎಕೆರೆ 30 ಗುಂಟೆಯನ್ನು ಇತರ ಆಸ್ತಿಗಳನ್ನು ಹಕ್ಕು ಖುಲಾಸೆ ಬರೆದುಕೊಟ್ಟ ಬಗ್ಗೆ ನಮೂದು ಇರುತ್ತದೆ.

11. ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುವ ಸಮಯದಲ್ಲಿ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿ ಮರಣ ಪ್ರಮಾಣ ಪತ್ರದಲ್ಲಿ ದಾಸಪ್ಪ ಇವರು 1973 ರಲ್ಲಿ ತೀರಿಕೊಂಡಿದ್ದು ಅದಕ್ಕಿಂತ ಮೊದಲೇ ದಾನ ಪತ್ರ ಬರೆದು ಕೊಟ್ಟಿದ್ದಾರೆ ಎಂಬುದಾಗಿದ್ದು ಅಲ್ಲದೆ ಗಂಡನ ಸಾಯುವ ಮೊದಲೇ ಪಹಣಿಯಲ್ಲಿ ಹೆಸರು ಬದಲಾವಣೆ ಯಾಗಿರುತ್ತದೆಂದು ಮತ್ತು ದಾವಾ ಆಸ್ತಿ ವಿಸ್ತೀರ್ಣ ಕೂಡ ಬದಲಾವಣೆ ಆಗಿರುತ್ತದೆ ಆದ್ದರಿಂದ ವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯಾದಂತಹ ಹಕ್ಕು ಹಿತಾಸಕ್ತಿ ಇರುವುದಿಲ್ಲ ದಾವ ಆಸ್ತಿಗೂ ವಾದಿಯರು ಹಾಜರು ಪಡಿಸಿದಂತಹ ದಾಖಲಾತಿಗಳಿಗೂ ಯಾವುದೇ ರೀತಿಯಾದಂತಹ ಸಂಬಂಧ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ.

12. ವಾದಿಯು ವಂಶವೃಕ್ಷದ ಪ್ರಮಾಣ ಪತ್ರವನ್ನು ಸಲ್ಲಿಸಿ ಪ್ರಮಾಣ ಪತ್ರದಲ್ಲಿ ದಾಸಪ್ಪ ಯಾನೆ ಗೌನಹಳ್ಳಿ ಚಿತ್ತಮ್ಮ ಇವರಿಗೆ ಸಣ್ಣಮ್ಮ ಎನ್ನುವ ಮಗಳು ಇರುತ್ತಾರೆ ಎಂದು ನಮೂದು ಮಾಡಿದ್ದು ಹಾಗೂ ಸರ್ವೆ ನಂ.144 ರ ಪಹಣಿ ಪತ್ರಿಕೆಗಳನ್ನು ಗಮನಿಸಿದಾಗ ಒಂದು ಪಹಣಿ ಪತ್ರಿಕೆಯಲ್ಲ ಚಿತ್ತಮ ಕೊಂ ದಾಸಪ್ಪ ಇವರ ಹೆಸರು ಕಾಲಂ 9 ರಲ್ಲಿ ನಮೂದಾಗಿರುವುದು ಕಂಡು ಬರುತ್ತದೆ ಇನ್ನೊಂದು ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.58 ನ್ನು ಕಡಿತಗೊಳಿಸಿ 144 ಎಂದು ನಮೂದಾಗಿದ್ದು ಆ ದಾಖಲಾತಿಯಲ್ಲಿ ಚಿಂತಮ್ಮ ಕೋಂ ದಾಸಪ್ಪ ಇವರ ಹೆಸರು ಕಡಿತಗೊಂಡು ಸಣ್ಣಮ್ಮ ಕೋಂ ಲಿಂಗಣ್ಣ ಇವರ ಹೆಸರು ನಮೂದಾಗಿರುತ್ತದೆ ನಂತರ ಆ ಹೆಸರು ಕಡಿತಗೊಂಡು ಹಿರೇ ಮಗ ಲಿಂಗಣ್ಣ ಮತ್ತು ಪಿಲ್ಲಪ್ಪ ಎಂದು ಕಾಲಂ.9 ರಲ್ಲಿ 1970-71 ರಲ್ಲಿ ನಮೂದಾಗಿರುವುದು ಕಂಡುಬರುತ್ತದೆ ಮತ್ತು ಸಣ್ಣಮ್ಮನ ಹೆಸರಿನಲ್ಲಿ 1980-81 ರಲ್ಲಿಯೂ

ಕೂಡ ರಶೀದಿ ಪಟ್ಟಿ ಇರುವ ಬಗ್ಗೆ ನಮೂದು ಇರುತ್ತದೆ. ಸರ್ವೇ ನಂ.62 ರ ಪಹಣಿಯಲ್ಲಿ ದಾಸಪ್ಪ ಬಿನ್ ಕರಿಯಪ್ಪ ಎಂದು ನಮೂದಾಗಿರುವುದು ಕಂಡುಬರುತ್ತದೆ .

13. ಪ್ರತಿವಾದಿಯವರ ಪ್ರಕಾರ ದಾವಾ ಆಸ್ತಿಯು ದಾಸಪ್ಪ ಇವರ ಆಸ್ತಿಯಾಗಿದ್ದು 9 ಎಕರೆ 20 ಗುಂಟೆ ಅವರ ತಾತ ದಾಸಪ್ಪರವರಿಗೆ ಮಂಜೂರಾಗಿರುತ್ತದೆ ಎಂಬುದಾಗಿದ್ದು ಹಾಗೂ , ದಾಸಪ್ಪ ಇವರಿಗೆ ಇಬ್ಬರ ಹೆಂಡತಿಯರಿದ್ದು ಅವರು ದಂಡಮ್ಮ ಮತ್ತು ನಿಂಗಜ್ಜಿಯಾಗಿದ್ದು ಅವರ ಮೊದಲ ಹೆಂಡತಿಗೆ ಚಿತ್ತಪ್ಪ ಎನ್ನುವ  ಮಗನಿದ್ದು ಎರಡನೇ ಹೆಂಡತಿಗೆ ಒಬ್ಬಳೇ ಮಗಳು ಕರಿಯಮ್ಮ ಇರುತ್ತಾರೆ ಎಂದು, ವಾದಿಯು ಅವರ ಕುಟುಂಬಕ್ಕೆ ಸಂಬಂಧಪಟ್ಟದ್ದಾಗಿರುವುದಿಲ್ಲವೆಂದು ಹಾಗೂ ದಾಸಪ್ಪ ರವರು 03.06.1973 ರಂದು ತೀರಿಕೊಂಡಿರುತ್ತಾರೆಂದು ಹಾಗೂ ಅವರ ಮಗ ಚಿತ್ತಪ್ಪ ಅವರಿಗಿಂತ ಪೂರ್ವದಲ್ಲಿ 03.03.1976 ರಂದು ತೀರಿಕೊಂಡಿರುತ್ತಾರೆಂದು ಆದರಿಂದ ಪ್ರತಿವಾದಿ ಒಬ್ಬರೇ ದಾವ ಆಸ್ತಿಗೆ ಮಾಲೀಕರಾಗಿರುತ್ತಾರೆ ಎಂಬುದಾಗಿರುತ್ತದೆ

14. ಈ ಹಂತದಲ್ಲಿ ವಾದಿ ಮತ್ತು ಪ್ರತಿವಾದಿ ಅವರ ಖಂಡನೆಯನ್ನು ಪರಿಗಣಿಸಬೇಕಾದಲ್ಲಿ ಸಾಕ್ಷಾಧಾರಗಳ ಅವಶ್ಯಕತೆ ಇರುತ್ತದೆ. ದಾವಾ ಆಸ್ತಿಯ ಮೂಲ ಪುರುಷ  ದಾಸಪ್ಪ ಎನ್ನುವವರು ವಾದಿಯರ ಕುಟುಂಬಕ್ಕೆ ಸಂಬಂಧಪಟ್ಟ ವ್ಯಕ್ತಿಯು ಅಥವಾ ಪ್ರತಿವಾದಿಯವರ ಕುಟುಂಬಕ್ಕೆ ಸಂಬಂಧಪಟ್ಟ ವ್ಯಕ್ತಿಯೋ ಎನ್ನುವ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಲು ಸಾಕ್ಷ್ಯ ವಿಚಾರಣೆ ಅವಶ್ಯಕತೆ ಇರುತ್ತದೆ .

15. ಈ ಹಂತದಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸುವಂತಹ ಅವಶ್ಯಕತೆ ಇರುವುದಿಲ್ಲ. ಆದರೆ ದಾವೆಯು ವಿವಾದದಲ್ಲಿರುವಾಗ ದಾವಾ ಸ್ವತ್ತಿಗೆ ಹಾನಿಯಾಗುತ್ತದೆ ಎಂಬ ಭಯವಿದ್ದರೂ ಕೂಡ ಅದನ್ನು ತಡೆಯುವುದು ಅವಶ್ಯಕತೆಯಾಗಿರುತ್ತದೆ.  ಈ ಹಂತದಲ್ಲಿ ಮೇಲ್ನೋಟಕ್ಕೆ ವಾದಿಯರು

ಸಮ್ಮತವಾದ ದಾವೆಯನ್ನು ಹೊಂದಿದ್ದಾರೆಂದು ಕಂಡು ಬಂದಿರುತ್ತದೆ. ಆದ್ದರಿಂದ, ಅಂಶ–1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

16. **<u>ಅಂಶ–2 ರಿಂದ 4</u>–** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದರಿಂದ, ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದಾವೆಯು ವಿವಾದದಲ್ಲಿರುವಾಗ ಯಾವುದೇ ಸ್ವತ್ತು ದಾವೆಯ ಯಾವುದೇ ಪಕ್ಷಗಾರರಿಂದ ಹಾನಿಗೊಳಗಾಗುವ ಅಥವಾ ಪರಭಾರೆ ಮಾಡುವ ಅಥವಾ ವಾದಿಯ ಸ್ವಾಧೀನದಿಂದ ತಪ್ಪಿಸುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದಲ್ಲಿ ಮುಂದಿನ ಆದೇಶವಾಗುವವರೆಗೆ ಅಂತಹ ಕೃತ್ಯವನ್ನು ನಿಗ್ರಹಿಸುವ ಮೂಲಕ ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿದೆ ದಾವಾ ಸ್ವತ್ತಿನ ಬಗ್ಗೆ ವಾದಿಸುತ್ತಿರುವ ಪಕ್ಷಗಾರರು ತಮ್ಮ ಹಕ್ಕುಗಳನ್ನು ನಿರ್ಣಯಿಸುವವರೆಗೆ ದಾವಾ ಸ್ವತ್ತಿನ ಸ್ಥಿತಿ–ಗತಿಗಳನ್ನು ದಾವೆ ಹೂಡುವಾಗ ಇದ್ದ ಸ್ಥಿತಿಯಲ್ಲಿ ಇರಿಸಿಕೊಂಡು ಹೋಗಬೇಕೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಬೇಕೆಂದು ಇರುವ ಇನ್ನೊಂದು ಮಹತ್ವದ ಉದ್ದೇಶವಾಗಿರುತ್ತದೆ.

17. ವಾದಿಯರು ಕೇವಲ ಈ ದಾವೆಯು ಮುಗಿಯವರೆಗೆ ಪ್ರತಿವಾದಿಯರು ದಾವಾ ಆಸ್ತಿಯನ್ನು ಯಾರಿಗೂ ಯಾವುದೇ ರೀತಿಯಿಂದ ಪರಭಾರೆ ಮಾಡದಂತೆ ಮತ್ತು ಯಾವುದೇ ಋಣಭಾರ ಹೊರಿಸದಂತೆ ಈ ದಾವೆಯ ಅಂತಿಮ ಆದೇಶ ಆಗುವವರೆಗೂ ಪ್ರತಿವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುವುದು ಕಂಡು ಬಂದಿದ್ದು, ಒಂದು ವೇಳೆ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯನ್ನು ಪ್ರತಿವಾದಿಯರು ಮಾರಾಟ ಮಾಡಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಹಾಗೂ ಅನಾನುಕೂಲತೆಯ ಒಲವು ವಾದಿಯರ ಪರವಾಗಿರುತ್ತದೆ. ಆದರೆ ಈ ದಾವೆಯಲ್ಲಿ ಅಂತಿಮ ತೀರ್ಪು ಆಗುವವರೆಗೂ ದಾವಾ

ಆಸ್ತಿಯನ್ನು ಬೇರೆ ಯಾರಿಗೂ ಮಾರಾಟ ಮಾಡಬಾರದಂತೆ ಆದೇಶ ಮಾಡಿದ್ದಲ್ಲಿ, ಪ್ರತಿವಾದಿಯರಿಗೆ ಯಾವುದೇ ರೀತಿಯಾದಂತಹ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ಕಾರಣಗಳಿಂದಾಗಿ ಅಂಶ–2 ರಿಂದ ಅಂಶ–4 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

18.ಅಂಶ–5ಃ– ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಅರ್ಜಿದಾರರು / ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿಯವರಾಗಲೀ ಅವರ ಏಜೆಂಟ್‌ರಾಗಲೀ, ಅವರ ಸೇವಕರಾಗಲೀ ಪರ ಪಿ ಎ ಹೋಲ್ಡರ್ ಆಗಲೀ ಮತ್ತು ಅವರ ಪರ ಕೆಲಸ ಮಾಡುವ ಯಾವುದೇ ವ್ಯಕ್ತಿಯಾಗಲೀ ಈ ದಾವೆಯ ಅಂತಿಮ ತೀರ್ಪು ಆಗುವವರೆಗೆ ದಾವಾ ಅನುಸೂಚಿಯನ್ನು ಯಾರಿಗೂ ಮಾರಾಟ ಮಾಡಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 27 ನೇ ಮಾರ್ಚ್ –2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.